# ಸಹಕಾರಿ ಸಂಘಟನೆಗಳಲ್ಲಿ ಪರಿಣಾಮಕಾರಿ ನಾಯಕತ್ವ

▸▸ ಯಶವಂತ ಡೋಂಗ್ರೆ

**"ಸಹಕಾರಿ ಸಂಸ್ಥೆಗಳ ಯಶಸ್ಸಿಗೆ ಅಗತ್ಯವಿರುವುದು ಒಬ್ಬ ದೊಡ್ಡ ನಾಯಕನಲ್ಲ, ಹಲವು ಸಣ್ಣ ನಾಯಕರು" – ವರ್ಗೀಸ್ ಕುರಿಯನ್**

ಸಹಕಾರಿ ನಾಯಕತ್ವ (ಕೋ ಆಪರೇಟಿವ್ ಲೀಡರ್ ಶಿಪ್) ಎನ್ನುವುದು ಸಾಮಾನ್ಯ ಅರ್ಥದಲ್ಲಿ ಉಪಯೋಗಿಸುವ ನಾಯಕತ್ವ (ಲೀಡರ್‌ಶಿಪ್) ಅಥವಾ ನಾಯಕ (ಲೀಡರ್) ಶಬ್ದಗಳ ವ್ಯಾಪ್ತಿಗಿಂತ ಭಿನ್ನವೂ, ವಿಸ್ತಾರವೂ ಆದ ಸಂರಚನೆಯಾಗಿದೆ. ಈ ಭಿನ್ನತೆಯೂ ಸಹಕಾರಿ ಸಂಸ್ಥೆಗಳ ವಿಶಿಷ್ಟ ಅನನ್ಯತೆ (ಯುನಿಕ್ ಐಡೆಂಟಿಟಿ)ಯ ಕಾರಣದಿಂದಾಗಿ ಸೃಷ್ಟಿಯಾಗುತ್ತದೆ. ಆದುದರಿಂದ ಸಹಕಾರ ಕ್ಷೇತ್ರದಲ್ಲಿನ ಪರಿಣಾಮಕಾರಿ ನಾಯಕತ್ವದ ಬಗ್ಗೆ ಅರಿವು ಮೂಡಬೇಕಾದರೆ ಸಹಕಾರಿ ಸಂಸ್ಥೆಗಳ ಅನನ್ಯತೆ ಮೊದಲು ಅರಿವಾಗಬೇಕಾಗುತ್ತದೆ. ಆದುದರಿಂದ ಈ ಅನನ್ಯತೆಯ ಅಂಶಗಳಿಂದ ನಮ್ಮ ಚಿಂತನೆಯನ್ನು ಆರಂಭಿಸೋಣ.

**ಸಹಕಾರಿ ಸಂಸ್ಥೆಗಳ ಅನನ್ಯತೆ :** ಸಹಕಾರಿ ಸಂಘಟನೆಗಳು ಕೇವಲ ತಾಂತ್ರಿಕವಾಗಿ ರಚಿಸಲ್ಪಟ್ಟು, ಸಹಕಾರಿ ಕಾಯಿದೆಯಡಿಯಲ್ಲಿ ನೋಂದಾಯಿಸಲ್ಪಡುವುದರಿಂದ ತಮ್ಮ ವಿಶಿಷ್ಟತೆಯನ್ನು ಪಡೆಯುವುದಿಲ್ಲ. ಬದಲಿಗೆ, ನಿರ್ದಿಷ್ಟ ಗುಣಲಕ್ಷಣಗಳನ್ನು ಹೊಂದಿದ್ದಲ್ಲಿ ಮಾತ್ರವೇ ನಿಜವಾದ ಸಹಕಾರಿ ಸಂಸ್ಥೆಗಳಾಗುತ್ತದೆ. ಇಂತಹ ಗುಣಲಕ್ಷಣಗಳನ್ನು ಮೊದಲಾಗಿ ಗಮನಿಸೋಣ.

(ಅ) ಸಹಕಾರಿ ಸಂಸ್ಥೆಗಳು ಸದಸ್ಯ ಕೇಂದ್ರಿತ (ಮೆಂಬರ್ ಸೆಂಟರ್ಡ್) ಮತ್ತು ಸದಸ್ಯ ನಿರ್ದೇಶಿತ (ಮೆಂಬರ್ ಡೈರೆಕ್ಟೆಡ್) ಸಂಸ್ಥೆಗಳು ಎಲ್ಲ ಸಂದರ್ಭದಲ್ಲೂ ಸದಸ್ಯರ ಒಳಿತಿಗಾಗಿ ಕಾರ್ಯ ನಡೆಸುವುದು ಸಹಕಾರಿ ಸಂಸ್ಥೆಗಳ ಕರ್ತವ್ಯ. ಸದಸ್ಯರು ಸಕ್ರಿಯವಾಗಿರದ ಸಂಸ್ಥೆಗಳನ್ನು ಸಹಕಾರಿ ಸಂಸ್ಥೆಗಳೆಂದು ಗುರುತಿಸಲಾಗದು. ಕೆಲವೇ ಸದಸ್ಯರು ಅಥವಾ ನಾಯಕರು ದೀರ್ಘಕಾಲ ಸಂಸ್ಥೆಯನ್ನು ಮುನ್ನಡೆಸುತ್ತಿದ್ದು, ಸಂಸ್ಥೆಯ ಮೇಲೆ ನಿಯಂತ್ರಣ ಹೊಂದಿದ್ದರೆ ಆ ಸಂಸ್ಥೆ ತನ್ನ ಸಹಕಾರಿ ಅನನ್ಯತೆಯನ್ನು ಕಳೆದುಕೊಳ್ಳುತ್ತದೆ.

(ಆ) ಸಹಕಾರಿ ಸಂಸ್ಥೆಗಳ ಸದಸ್ಯರ ಅಗತ್ಯಗಳನ್ನು (ಮೆಂಬರ್ ನೀಡ್ಸ್) ಸಂಸ್ಥೆಯ ವ್ಯವಹಾರವನ್ನಾಗಿ ಪರಿವರ್ತಿಸುವ ಸಂಸ್ಥೆಗಳೇ ಹೊರತು ಮಾರುಕಟ್ಟೆಯ ಬೇಡಿಕೆಯನ್ನು (ಮಾರ್ಕೆಟ್ ಡಿಮ್ಯಾಂಡ್) ಆಧರಿಸಿ ವ್ಯವಹಾರ ಸಂಘಟಿಸುವ ಸಂಸ್ಥೆಗಳಲ್ಲ. ಮಾರುಕಟ್ಟೆಯ ಬೇಡಿಕೆಯ ಆಧಾರದಲ್ಲಿ ವ್ಯವಹಾರಕ್ಕೆ ತೊಡಗಿದಂತೆಲ್ಲ, ಸದಸ್ಯರ ಅಗತ್ಯಗಳಿಂದ ದೂರವಾಗುವ ಸಾಧ್ಯತೆ ಇರುತ್ತದೆ ಮತ್ತು ಸದಸ್ಯರಲ್ಲದವರ ಬೇಡಿಕೆಗಳ ಪೂರೈಕೆಯೆಡೆಗೆ ಗಮನಹರಿಸಬೇಕಾಗುತ್ತದೆ. ಈ ರೀತಿಯ ವ್ಯವಹಾರದಿಂದಾಗಿ ಸಂಸ್ಥೆಯ ಲಾಭ ಹೆಚ್ಚಾಗಬಹುದು. ಆದರೆ, ಸಹಕಾರಿಯ ಅನನ್ಯತೆ ಕಳೆದು ಹೋಗುತ್ತಾ ಖಾಸಗಿ ವ್ಯವಹಾರ ಸಂಸ್ಥೆಯ ಗುಣಲಕ್ಷಣಗಳು ಆವರಿಸುತ್ತವೆ.

(ಇ) ಸಹಕಾರಿ ಸಂಸ್ಥೆಗಳು, ಸಂಸ್ಥೆಯ ಸೇವೆಗಳನ್ನು ಹೆಚ್ಚು ಹೆಚ್ಚು ಉಪಯೋಗಿಸುವ ಸದಸ್ಯರಿಗೆ ಹೆಚ್ಚಿನ ಲಾಭ ದೊರೆಯುವಂತೆ ನೋಡಿಕೊಳ್ಳಬೇಕಾದ ಸಂಸ್ಥೆಗಳು. ಅಂದರೆ, ಹೂಡಿಕೆ ಮಾಡಿದ ಬಂಡವಾಳದ ಆಧಾರದಲ್ಲಿ ಹೆಚ್ಚಿನ ಲಾಭಾಂಶ ನೀಡುವ ಸಂಸ್ಥೆಗಳಾಗಿರದೇ, ಸಂಸ್ಥೆಯ ಸೇವೆ/ ಸರಕುಗಳನ್ನು ಹೆಚ್ಚಾಗಿ ಪಡೆಯುವ ಸದಸ್ಯರಿಗೆ ಹೆಚ್ಚಿನ ಲಾಭಾಂಶ ನೀಡಬೇಕಾದ ಸಂಸ್ಥೆಗಳು.

(ಈ) ಸಹಕಾರಿ ಸಂಸ್ಥೆಗಳು ಪ್ರಜಾ ಸಮಾಜದ (ಸಿವಿಲ್ ಸೊಸೈಟಿ) ಅಂಗ ಸಂಸ್ಥೆಗಳು. ಒಂದು ನಿರ್ದಿಷ್ಟ ಜನಸಮೂಹವು ತನ್ನ ಅಗತ್ಯಗಳಿಗಾಗಿ ತಾನೇ ರಚಿಸಿಕೊಂಡ ಆಂತರಿಕ ಒಳನೋಟದ (ಇನ್‌ವರ್ಡ್ ಲುಕಿಂಗ್) ಸಂಸ್ಥೆಗಳು. ಆದುದರಿಂದ ಪ್ರಜಾಸತ್ತಾತ್ಮಕ ನೆಲೆಯಲ್ಲಿ, ಸದಸ್ಯರ ಸಕ್ರಿಯ ಭಾಗವಹಿಸುವಿಕೆಯ ಆಧಾರದಲ್ಲಿ ಉತ್ತಮ ಸಾಂಸ್ಥಿಕಧರ್ಮ ಪಾಲನೆ ಮಾಡಬೇಕಾದ (ಗುಡ್ ಗವರ್ನೆನ್ಸ್) ಸಂಸ್ಥೆಗಳು. ಆದುದರಿಂದ ನಿರ್ಧಾರಗಳಲ್ಲಿ ಪಾರದರ್ಶಕತೆ (ಟ್ರಾನ್ಸ್‌ಪರೆನ್ಸಿ), ಪರಿಣಾಮಗಳಿಗೆ ಉತ್ತರದಾಯಿತ್ವ (ಅಕೌಂಟೆಬಿಲಿಟಿ), ಎಲ್ಲರ ಭಾಗವಹಿಸುವಿಕೆಗೆ ಅವಕಾಶ (ಪಾರ್ಟಿಸಿಪೇಶನ್) ಮತ್ತು ಕಾನೂನಿನ ಪರಿವಿಧಿಗಳಿಗೆ ಬದ್ಧತೆ (ರೂಲ್ ಆಫ್ ಲಾ) ಇವುಗಳು ಯಾವುದೇ ಸಹಕಾರಿ ಸಂಸ್ಥೆಯಲ್ಲಿ ಇರಲೇಬೇಕಾದ ಗುಣಗಳು.

(ಉ) ವ್ಯವಹಾರ ಕ್ಷೇತ್ರದಲ್ಲಿ ಸಹಕಾರಿ ಸಂಸ್ಥೆಗಳು ನಿರ್ವಹಿಸಬೇಕಾದ ಪ್ರಾಥಮಿಕ ಪಾತ್ರ, ರಚನಾತ್ಮಕ ಸ್ಪರ್ಧಿಗಳ ರೂಪದಲ್ಲಿರಬೇಕು (ಕನ್‌ಸ್ಟ್ರಕ್ಟಿವ್ ಕಾಂಪಿಟೇಟರ್), ಅಂದರೆ, ಸಹಕಾರಿ ಸಂಸ್ಥೆಗಳು ಯಾವುದೇ ಕ್ಷೇತ್ರದಲ್ಲಿ ಏಕಸ್ವಾಮ್ಯವನ್ನು, ಮಾರುಕಟ್ಟೆ ಪೂರ್ಣ ನಿಯಂತ್ರಣವನ್ನು ಹೊಂದಿರಬೇಕಾದ ಸಂಸ್ಥೆಗಳಲ್ಲ. ಬದಲಿಗೆ, ತಮ್ಮ ಅಸ್ತಿತ್ವದಿಂದಾಗಿ ಖಾಸಗಿ ಮತ್ತು ಸಹಕಾರಿ ವ್ಯವಹಾರ ಸಂಘಟನೆಗಳ ಕಾರ್ಯಾನುಷ್ಠಾನದ ಮೇಲೆ ನಿರಂತರ ಪ್ರಭಾವ ಬೀರಬೇಕಾದ ಸಂಸ್ಥೆಗಳು. ಉತ್ತಮ ಮತ್ತು ಪರಿಣಾಮಕಾರಿ ನಾಯಕತ್ವವು ಸಹಕಾರಿ ಸಂಸ್ಥೆಗಳ ಈ ಅನನ್ಯತೆಯನ್ನು ಅರಿತು ನಡೆಯುವ ನಾಯಕತ್ವವಾಗಿರಬೇಕು.

(ಮುಂದಿನ ಸಂಚಿಕೆಗೆ...)